ಅನುಬಂಧ–1

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)
ಕರ್ನಾಟಕ ಧನವಿನಿಯೋಗ ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ. 19)

2009–2010ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2009–2010ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಮದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮವಾಗಲಿ.

1. ಸಂಕ್ಷಿಪ್ತ ಹೆಸರು: – ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2009–2010ನೇ ಹಣಕಾಸು ವರ್ಷಕ್ಕಾಗಿ 21,25,913.72 ಲಕ್ಷ ರೂಪಾಯಿಗಳ ನೀಡಿಕೆ: – ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಲಾದ ಸೇವೆಗಳ ಸಂಬಂಧದಲ್ಲಿ 2009–2010ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಇಪ್ಪತ್ತೊಂದು ಸಾವಿರದ ಇನ್ನೂರ ಐವತ್ತೊಂಬತ್ತು ಕೋಟಿ ಹದಿಮೂರು ಲಕ್ಷದ ಎಪ್ಪತ್ತೆರಡು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ: – ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾವ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

ಭೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನಸಭೆಯಿಂದ ಪುರಸ್ಕೃತ ವಾದುದನ್ನು	ಸಂಚಿತನಿಧಿಯಿಂದ ಪ್ರಭೃತ ವಾದುದನ್ನು	ಒಟ್ಟು
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	56,109.47	7.82	56,117.29
		ಬಂಡವಾಳ	825.00	–	825.00
02	ಪಶು ಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	22,684.05	7.84	22.691.89
		ಬಂಡವಾಳ	2,421.71	–	2,421.71
03	ಆರ್ಥಿಕ	ರಾಜಸ್ವ	1,84,186.68	10.97	1,84,197.65
		ಬಂಡವಾಳ	342.21	–	342.21
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	12,329.07	2944.13	15,273.40
		ಬಂಡವಾಳ	–	–	–
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	73.375.44	–	73,375.44
		ಬಂಡವಾಳ	11.627.77	–	11.627.77
06	ಮೂಲಭೂತ ಸೌಕರ್ಯ	ರಾಜಸ್ವ	349.24	–	349.24
		ಬಂಡವಾಳ	13,705.89	–	13,705.89
07	ಗ್ರಾಮೀಣಾಭಿವೃದ್ಧಿಮತ್ತು ಪಂಚಾಯತಿ ರಾಜ್	ರಾಜಸ್ವ	51,717.81	–	51,717.81
		ಬಂಡವಾಳ	51,641.70	–	51,641.70
08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	16,328.82	367.46	16,696.28
		ಬಂಡವಾಳ	103.16	–	103.16
09	ಸಹಕಾರ	ರಾಜಸ್ವ	10,867.71	–	10,867.71
		ಬಂಡವಾಳ	439.07	–	439.07

10	ಸಮಾಜ ಕಲ್ಯಾಣ	ರಾಜಸ್ವ	64,450.90	–	65,450.90
		ಬಂಡವಾಳ	8,077.52	–	8077.52
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	52,330.13	–	52,330.13
		ಬಂಡವಾಳ	2,379.30	–	2,379.30
12	ವಾರ್ತಾ ಪ್ರವಾಸೋದ್ಯವ ಮತ್ತು ಯುವಜನ ಸೇವೆಗಳು	ರಾಜಸ್ವ	6,846.13	–	6,846.13
		ಬಂಡವಾಳ	3,663.00	–	3,663.00
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	26,695.96	0.89	26,696.85
		ಬಂಡವಾಳ	594.00	–	594.00
14	ಕಂದಾಯ	ರಾಜಸ್ವ	70,495.62	36.41	70,532.03
		ಬಂಡವಾಳ	3,306.60	–	3,306.60
15	ಮಾಹಿತಿ ತಂತ್ರಜ್ಞಾನ	ರಾಜಸ್ವ	1,124.54	–	1,124.54
		ಬಂಡವಾಳ	547.80	–	547.80
16	ವಸತಿ	ರಾಜಸ್ವ	24,358.51	–	24,358.51
		ಬಂಡವಾಳ	8,289.35	–	8,289.35
17	ಶಿಕ್ಷಣ	ರಾಜಸ್ವ	2,87,161.97	–	2,87,161.97
		ಬಂಡವಾಳ	8,610.74	–	8,610.74
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	44,479.78	0.09	44,479.87
		ಬಂಡವಾಳ	3,511.86	–	3,511.86
19	ನಗರಾಭಿವೃದ್ಧಿ	ರಾಜಸ್ವ	1,44,131.27	–	1,44,131.27
		ಬಂಡವಾಳ	42,459,78	–	42,459.78
20	ಲೋಕೋಪಯೆ ೂೀಗಿ	ರಾಜಸ್ವ	43,107.95	–	43,107.95
		ಬಂಡವಾಳ	79,058.76	–	79,058.76
21	ಜಲ ಸಂಪನ್ಮೂಲ	ರಾಜಸ್ವ	11,184.01	–	11,184.01
		ಬಂಡವಾಳ	1,48,658.06	–	1,48,658.06
22	ಆರೋಗ್ಯ ಮತ್ತು ಕುಟುಂಬ	ರಾಜಸ್ವ	64,234.04	–	64,234.04
		ಬಂಡವಾಳ	11,779.68	–	11,779.68

	ಕಲ್ಯಾಣ ಸೇವೆಗಳು				
23	ಕಾರ್ಮಿಕ	ರಾಜಸ್ವ	11,970.03	–	11,970.03
		ಬಂಡವಾಳ	99.00	–	99.00
24	ಇಂಧನ	ರಾಜಸ್ವ	80,500.42	62.70	80,563.12
		ಬಂಡವಾಳ	25,146.00	–	25,146.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	6,425.22	–	6,425.22
		ಬಂಡವಾಳ	389.94	–	389.94
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	14,017.48	–	14,017.48
		ಬಂಡವಾಳ	–	–	–
27	ಕಾನೂನು	ರಾಜಸ್ವ	8,558.15	–	8,558.15
		ಬಂಡವಾಳ	–	–	–
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	2,364.58	46.19	2,410.77
		ಬಂಡವಾಳ	–	–	–
29	ಋಣ ಮೇಲುಸ್ತುವಾರಿ	ರಾಜಸ್ವ	–	1,84,074.00	1,84,074.00
		ಬಂಡವಾಳ	–	1,17,292.17	1,17,292.17
ಒಟ್ಟು			18,21,063.05	3,04,850.67	21,25,913.72

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009–2010ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಫಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ–2

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 20)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:– (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ರ ಏಪ್ರಿಲ್ ತಿಂಗಳ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ:– ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32)(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (13)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(13–ಎ)"ವಿದ್ಯುನ್ಮಾನ ತೆರಿಗೆ ರಿಜಿಸ್ಟರ್" ಎಂದರೆ, ತೆರಿಗೆ ಬೆಲೆಪಟ್ಟಿಯ ನೀಡಿಕೆ ಅಥವಾ ಅಂಥ ಮಾರಾಟದ ಬಿಲ್ಲುಗಳನ್ನು ನೀಡಲು ಮತ್ತು ಅಂಥ ಮಾರಾಟದ ವಿವರಗಳನ್ನು ದಾಖಲಿಸುವ ಉದ್ದೇಶಕ್ಕಾಗಿ ಬಳಸಲಾದ ಒಂದು